ನೀಡಿದ್ದು, 542 ಅಡುಗೆಯವರು 800 ಅಡುಗೆ ಸಹಾಯಕರು, 293 ಕಾವಲುಗಾರರು, 86 ಜವಾನರು, 158 ಸ್ವಚ್ಚತಾ ಸಿಬ್ಬಂದಿಯನ್ನು ನೇರ ನೇಮಕಾತಿ ಬದಲಿಗೆ ಹೊರಮೂಲದಿಂದ ಪಡೆಯಲು ಅನುಮತಿ ನೀಡಿರುತ್ತದೆ.

- ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ನಿಲಯ ಮೇಲ್ವಿಚಾರಕರ 337 ಹುದ್ದೆಗಳು ಹಾಗೂ ನಿಲಯ ಪಾಲಕರ 45 ಹಾಗೂ 34 ಆಶ್ರಮಶಾಲಾ ಶಿಕ್ಷಕರು, ಗ್ರೂಪ್–ಸಿ ಹುದ್ದೆಗಳನ್ನು ಭರ್ತಿಮಾಡಲು ದಿನಾಂಕ:2–8–2008 ಮತ್ತು 24–6–2008ರ ಪತ್ರದಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ತಿಳಿಸಲಾಗಿದೆ.
- ಗ್ರೂಪ್–ಡಿ ವೃಂದದ ಅಡುಗೆಯವರು, ಅಡುಗೆಸಹಾಯಕರು, ರಾಷ್ಟ್ರ ಕಾವಲುಗಾರರು, ಜವಾನರು ಮತ್ತು ಸ್ವಚ್ಚತಾ ಸಿಬ್ಬಂದಿ ಹುದ್ದೆಗಳನ್ನು ಹೊರಮೂಲದಿಂದ ಭರ್ತಿ ಮಾಡಲು ದಿನಾಂಕ:11–11–2008ರಲ್ಲಿ ಸೂಚನೆ ನೀಡಿದ್ದು, ಈಗಾಗಲೇ ಅದರಂತೆ ಜಿಲ್ಲೆಗಳಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ದಲಿತ ಮಹಿಳೆಯ ಕುಟುಂಬಕ್ಕೆ ಪರಿಹಾರ ನೀಡುವುದು

21 ಶ್ರೀ ಆರ್.ಧ್ರುವನಾರಾಯಣ್

ಡಿ.ಸುಧಾಕರ್(ಸಮಾಜ ಕಲ್ಯಾಣ ಸಚಿವರು.)

ಅ) ಮಾಗಡಿ ತಾಲ್ಲೂಕಿನ ಗೆಜಗಾರಕುಪ್ಪೆ ಸಮೀಪದ ಲಕ್ಕಸಂದ್ರ ಗ್ರಾಮದ ಕಿರು ನೀರು ಸರಬರಾಜು ಟ್ಯಾಂಕಿನಲ್ಲಿ ಕುಡಿಯುವ ನೀರು ಹಿಡಿದಿದ್ದರಿಂದ ದಲಿತ ಮಹಿಳೆಯನ್ನು ಜಾತಿ ಹೆಸರಲ್ಲಿ ನಿಂದಿಸಿ, ಪಂಚಾಯಿತಿ ನಡೆಸಿ, 101 ರೂಪಾಯಿಗಳ ದಂಡ ಹಾಕಿದ್ದರಿಂದ ಅವಮಾನಿತಳಾಗಿ ದಲಿತ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿರುತ್ತದೆ.

ಆ) ಆ ಮಹಿಳೆಯ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ; ಎಷ್ಟು ಹಣವನ್ನು ಪರಿಹಾರದ ರೂಪದಲ್ಲಿ ನೀಡಲಾಗಿದೆ; ಪರಿಹಾರ ಕೊಟ್ಟಿಲ್ಲದಿದ್ದಲ್ಲಿ ಅದನ್ನು ಎಂದು ನೀಡಲಾಗುವುದು;

ಹೌದು. ರೂ.50.000.00 ಮೊತ್ತದ ಪರಿಹಾರ ನೀಡಲಾಗಿದೆ.

ಇ ಈ ಘಟನೆಗೆ ಕಾರಣರಾದವರ ಮೇಲೆ ಏನು ಕ್ರಮ ಕೈಗೊಳ್ಳಲಾಗುವುದು?

ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಒಪ್ಪಿಸಲಾಗಿತ್ತು. ಆದರೆ ಆರೋಪಿಗಳು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದು ಕಾನೂನಿನ್ವಯ ಮುಂದಿನ ಕ್ರಮ ಜರುಗಿಸಲಾಗುವುದು.